# 1ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರ ನ್ಯಾಯಾಲಯ ಮೈಸೂರು.

**ಎಸ್.ಸಿ. ಸಂಖ್ಯೆಃ 94/ 2019**

ಫಿರ್ಯಾದುದಾರರು : ರಾಜ್ಯ ಸರ್ಕಾರ,
(ಆಲನಹಳ್ಳಿ ಆರಕ್ಷಕ ಠಾಣೆಯ ಮೂಲಕ)

: ವಿರುದ್ಧ :

ಆರೋಪಿತರು : ವಿನಾಯಕ ಬಿ

**:- ದೋಷಾರೋಪಣೆ :-**

ಮೈಸೂರಿನ 1ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರಾದ ಶ್ರೀಮತಿ. ಅಶ್ವಿನಿ ವಿಜಯ್ ಶಿರಿಯಣ್ಣವರ್, ಬಿಎ, ಎಲ್‌ಎಲ್,ಬಿ. ಆದ ನಾನು, ನಿಮ್ಮ ವಿರುದ್ಧ ಈ ಕೆಳಕಂಡಂತೆ ದೋಷಾರೋಪಣೆಯನ್ನು ರಚಿಸುತ್ತೇನೆಃ-

ಆರೋಪಿಯಾದ :-
ವಿನಾಯಕ ಬಿ

ಆದ ನಿಮ್ಮ ವಿರುದ್ಧ ಮಾಡಲಾದ ದೋಷಾರೋಪಣೆ ಏನೆಂದರೆಃ-

ನೀವು ಮೃತ ತೇಜಸ್ವಿಯನ್ನು ಅವಳಿಗೆ ಮದುವೆ ಆಗಿದ್ದು, ಗಂಡನಿದ್ದಾನೆ ಎಂದು ಗೊತ್ತಿದ್ದರೂ ಅವಳು ಗಂಡನನ್ನು ತೊರೆದು ಸಂಸಾರದಿಂದ ಹೊರ ಬರುವಂತೆ ಮಾಡಿ ದುಡ್ಡಿನ ಆಸೆಗಾಗಿ ಹಾಗೂ ಲೈಂಗಿಕ ಸುಖಕ್ಕಾಗಿ ಅವಳನ್ನು ಅಪರಾಗಿಕ ಉದ್ದೇಶದಿಂದ ಪುಸಲಾಯಿಸಿ ನಿಮ್ಮ ಜೊತೆಗೆ ಕರೆದುಕೊಂಡು ಹೋಗಿದ್ದು, ನೀವು ಭಾರತ ದಂಡ ಸಂಹಿಂತೆ ಕಲಂ 498 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಮತ್ತು ನನ್ನ ಸಂಜ್ಞೆಯಲ್ಲಿ ಬರುವ ಅಪರಾಧವನ್ನು ಎಸಗಿರುತ್ತೀರಿ.

ನೀವು ಮೃತಳಿಂದ ಅವಳ ಚಿನ್ನದ ಒಡವೆಗಳನ್ನು ತೆಗೆದುಕೊಂಡು ಮಣಿಪುರಂ ಫೈನಾನ್ಸ ನಲ್ಲಿ ಗಿರಿವಿ ಇಟ್ಟು, ಬಂದ ಹಣವನ್ನು, ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಮೃತಳನ್ನು ಬೈಯುವುದು ಗಂಡ ಮತ್ತು ಮಕ್ಕಳನ್ನು ಬಿಟ್ಟು ನನ್ನೊಂದಿಗೆ ಬಂದಿಯಾ ನನ್ನನ್ನು ಸಹ ಬಿಟ್ಟು ಬೇರೆಯವರನ್ನು

ನೋಡಿಕೊಂಡು ಹೋಗುವುದಿಲ್ಲ ಎಂದು ಏನು ಗ್ಯಾರಂಟಿ ನೀನು ಒಂದು ತರಹ ಹಾದರಗಿತ್ತಿ ಇದ್ದ ಹಾಗೆ ನೀನು ಇರುವುದಕ್ಕಿಂತ ಸಾಯುವುದೇ ಲೇಸು ಎಂದು ಪದೇ ಪದೇ ಬೈದು ನೀನು ಸತ್ತರೆ ನಾನು ನನ್ನ ಹೆಂಡತಿ ಮಕ್ಕಳೊಂದಿಗೆ ಇರುವುದಾಗಿ ಮೃತಳಿಗೆ ಸಾಯುವಂತೆ ಪ್ರಚೋದನೆ ನೀಡಿದ್ದರಿಂದ ಮೃತಳು ಜೀವನದಲ್ಲಿ ಜಿಗುಪ್ಸೆಗೊಂಡು ಡೆತ್ ನೋಟ್ ಬರೆದು ದಿನಾಂಕ 11.05.2018 ಕ್ಕೆ ಬೆಳಿಗ್ಗೆ 9 ಗಂಟೆಗೆ ಮೃತ ತೇಜಸ್ವಿ ಚಾಸಾ-26 ಬಸವರಾಜು ಅವರಿಗೆ ಸೇರಿದ ಮನೆ ನಂಬರ್ 287 ರಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು ಅವಳ ಆತ್ಮಹತ್ಯೆಗೆ ನೀವು ಪ್ರಚೋದನೆ ನೀಡಿರುವುದು ಕಾರಣವಾಗಿದ್ದು ನೀವು ಭಾರತ ದಂಡ ಸಂಹಿಂತೆ ಕಲಂ 306 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಮತ್ತು ನನ್ನ ಸಂಜ್ಞೆಯಲ್ಲಿ ಬರುವ ಅಪರಾಧವನ್ನು ಎಸಗಿರುತ್ತೀರಿ.

**ದಿನಾಂಕ 12ನೇ ಮಾರ್ಚ ಮಾಹೆ 2020.**

(ಅಶ್ವಿನಿ ವಿಜಯ್ ಶಿರಿಯಣ್ಣವರ್)
1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.